

# ರಬ್ಬರ್ ಹುಡುಗ

ಅಲ್ಲಿ ಚಿಕ್ಕ ವಯಸ್ಸಿನ ಸಹೋದರರು ಆಟವಾಡಿಕೊಳ್ಳುತ್ತಿದ್ದರು. ಆಟವಾಡುತ್ತಿರುವಾಗಲೇ ಅವರಲ್ಲಿ ಜಗಳವೇರ್ಪಟ್ಟಿತು. ನಾಲ್ಕು ವರ್ಷದ ಪೋರನೊಬ್ಬ ದೊಪ್ಪನೆ ಮಂಚದ ಮೇಲಿಂದ ಕೆಳಗೆ ನೆಗೆದ. ಅದೂ ಎರಡು ಕಾಲುಗಳನ್ನು ವಿರುದ್ಧ ದಿಕ್ಕಿನಲ್ಲಿ, ಆ ಕಡೆ ಈ ಕಡೆ ಸಮಾಂತರವಾಗಿ ನೆಲಕ್ಕೆ ಚಾಚಿ! ಅಕಸ್ಮಾತ್ ಅಲ್ಲಿಗೆ ಬಂದ ತಂದೆಗೆ ಈ ವಿಸ್ಮಯಗೊಳಿಸುವ ಕಸರತ್ತನ್ನು ನೋಡಿ ಅತ್ಯಾಶ್ಚರ್ಯವಾಯಿತು. 'ಈ ಹುಡುಗ ಯಾವುದೇ ಆಕಾರಕ್ಕೆ ತನ್ನ ದೇಹವನ್ನು ಮಣಿಸಬಲ್ಲ' ಎಂದರಿತ ಅವರು ಹತ್ತಿರದ ಲೈಬ್ರರಿಯಲ್ಲಿ ದೇಹ ತಿರುಚುವಿಕೆಯ ಅನೇಕ ಭಂಗಿಗಳ ಫೋಟೋಗಳನ್ನು ತಂದು ಮಗನಿಗೆ ತೋರಿಸಿದರು. ಆ ಮಗನೇ ವಿಶ್ವದಾದಂತ್ಯ ರಬ್ಬರ್ ಹುಡುಗನೆಂದೇ ಪ್ರಖ್ಯಾತನಾದ ಡೇನಿಯಲ್ ಬ್ರೌನಿಂಗ್ ಸ್ಮಿತ್.

ಡೇನಿಯಲ್ ಬ್ರೌನಿಂಗ್ ಸ್ಮಿತ್ ಹುಟ್ಟಿದ್ದು, 1979ರಲ್ಲಿ ಮೆರಿಡಿಯನ್ ಮಿಸಿಸಿಪ್ಪಿ ಎಂಬಲ್ಲಿ. ಬಾಲ್ಯದಲ್ಲಿಯೇ ಡೇನಿಯಲ್‌ಗೆ ದೇಹವನ್ನು ವಕ್ರಗತಿಯಲ್ಲಿ ಬಾಗಿಸುವುದರಲ್ಲಿ ಪರಿಣಿತಿ ಸಾಧಿಸಬೇಕೆಂಬ ಆಸೆ ಮೊಳೆಯಿತು. ಅದಮ್ಯ ಛಲ ಹೊತ್ತ ಈತ ಅದಕ್ಕಾಗಿ ಪ್ರಪಂಚದ ಹಲವು ಕಡೆ ತಿರುಗಿದ. ಈ ಗುರಿ ಸಾಧಿಸಲು ಹರೆಯದ ದಿನಗಳಲ್ಲೇ ಮನೆ ಬಿಟ್ಟು ಸರ್ಕಸ್ ಒಂದಕ್ಕೆ ಸೇರಿಕೊಂಡ. ಊರೂರು ಅಲೆದು ಪ್ರದರ್ಶನ ನೀಡಿದ.

ನಂತರ ಸೂಫಿ ಆಧ್ಯಾತ್ಮದ ಗೂಢಾರ್ಥಗಳನ್ನು ತಪಸ್ಸುಗೈದು ಸಿದ್ಧಿಸಿಕೊಂಡ ಡೇನಿಯಲ್ ಚೀನಾ ದೇಶದ ಪ್ರಾಚೀನ ಕಲೆಯಾದ ಆಕ್ರೋಬ್ಯಾಟ್ (ದೊಂಬರಾಟ)ನ್ನು ಲೂಮಿ ಎಂಬ ಗುರುವಿನಲ್ಲಿ ಕಲಿತುಕೊಂಡ. ಎಲ್ಲಾ ಸಾಧನೆಗಳನ್ನು ಚೆನ್ನಾಗಿ ಕರಗತ ಮಾಡಿಕೊಂಡಿರುವ ಡೇನಿಯಲ್ ಬ್ರೌನಿಂಗ್ ಸ್ಮಿತ್ ಇಂದು ಈ ಭೂಮಿಯಲ್ಲೇ ದೇಹವನ್ನು ಚೆನ್ನಾಗಿ ಬಾಗಿಸಬಲ್ಲ ಜೀವಂತ ವ್ಯಕ್ತಿ ಎಂಬ ಹೆಗ್ಗಳಿಕೆಯನ್ನು ತನ್ನದಾಗಿಸಿಕೊಂಡಿದ್ದಾನೆ.

ಡೇನಿಯಲ್ ನಟನೂ ಹೌದು. ಹಲವಾರು ಸಾಹಸ ಪ್ರಧಾನ ಸಿನಿಮಾಗಳಲ್ಲಿ ಈತ ನಟಿಸಿದ್ದಾನೆ. ಹಾಗೂ ಟಿ..ಶೋಗಳಲ್ಲಿ ಕಾರ್ಯಕ್ರಮ ನೀಡಿದ್ದಾನೆ. ಸಾಮಾನ್ಯವಾಗಿ ದೇಹವನ್ನು ವಕ್ರಗತಿಯಲ್ಲಿ ಬಾಗಿಸುವುದರ ತರಬೇತಿ ಹೊಂದಿದ ಹಲವರು, ಒಂದು ದಿಕ್ಕಿನಲ್ಲಿ ಮಾತ್ರ ಬಾಗಿಸಬಲ್ಲರು (ಹಿಂದೆ ಅಥವಾ ಮುಂದೆ ಬಾಗುವಿಕೆ.) ಆದರೆ ಡೇನಿಯಲ್ ಎಲ್ಲಾ ದಿಕ್ಕಿನಲ್ಲೂ ತನ್ನ ದೇಹವನ್ನು ಬಾಗಿಸಬಲ್ಲ! ಇವನು ತಲೆಯ ತುದಿಯನ್ನು ತನ್ನ ಪ್ಯಾಂಟಿನ ಸೀಟಿಗೆ ಮುಟ್ಟಿಸಬಲ್ಲ. ತೋಳು ಹಾಗೂ ಕಾಲಿನ ಕೀಲುಗಳ ಸ್ಥಳ ತಪ್ಪಿಸಬಲ್ಲ ಹಾಗೂ ತನ್ನ ಮುಂಡವನ್ನು 180 ಡಿಗ್ರಿಗೆ ತಿರುಚಬಲ್ಲ!

ಈ ತಿರುಚುವಿಕೆಯ ಸಾಧನೆಯಲ್ಲಿ ಡೇನಿಯಲ್ ಮೂರು ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ಗಳನ್ನು ಹೊಂದಿದ್ದಾನೆ. ತಂತಿಯಿರದ ಟೆನ್ನಿಸ್ ರಾಕೆಟ್‌ನಲ್ಲಿ ತನ್ನ ರಟ್ಟೆಗಳೆರಡರ ಕೀಲು ತಿರುಗಿಸಿ ತೂರಬಲ್ಲ ಈತ ಟಿ.ವಿ.ಗಿಂತ ಚಿಕ್ಕ (13.5 – 16 – 9.5) ಬಾಕ್ಸ್‌ನಲ್ಲಿ ಇಡೀ ದೇಹವನ್ನು ಮುದುರಿಸಿ ಕೂರಬಲ್ಲ. ಸದ್ಯ ಲಾಸ್ ಏಂಜಲೀಸ್‌ನಲ್ಲಿ ನೆಲೆಸಿರುವ 5 ಅಡಿ 8 ಇಂಚು ಎತ್ತರದ, 135 ಪೌಂಡ್ ತೂಕವುಳ್ಳ, ರಬ್ಬರ್ ಹುಡುಗ ಡೇನಿಯಲ್ ಸ್ಟೇಜ್‌ನಿಂದ ಸ್ಕ್ರೀನ್‌ವರೆಗೆ ಅಸಂಖ್ಯಾತ ಅಭಿಮಾನಿಗಳನ್ನು ಹೊಂದಿದ್ದಾನೆ.

■ ವಿದ್ಯಾ ಹಾಲಭಾವಿ

